ಆ. ಈ ರೀತಿ ಮಂಜೂರಾದ ಜಮೀನಿನಲ್ಲಿ ಬಿ.ಡಿ.ಓ. ಚಿಂತಾಮಣಿ ಯವರು 13 ಬಡ ಜನತೆಗೆ ಮನೆ ನಿವೇಶನ ಹಕ್ಕುಪತ್ರಗಳನ್ನು ನೀಡಿರುವುದು ನಿಜವೇ?

ಇ. 1979 ರಿಂದ ಇದುವರೆವಿಗೂ ಮನೆ ನಿವೇಶನಗಳ ಹಕ್ಕುಪತ್ರದ ಪ್ರಕಾರ ಸಂಬಂಧಪಟ್ಟವರಿಗೆ ಸ್ವಾಧೀನಪಡಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ. ಈ ರೀತಿ ಸರ್ಕಾರದ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸದೇ ಇರತಕ್ಕಂಥಹ ಅಧಿಕಾರಿಗಳ ಮೇಲೆ ಏನು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು)

ಅ. ಜಮೀನು ಮಂಜೂರಾಗಿರುವ ಬಗ್ಗೆ ದಾಖಲೆಗಳಿಂದ ಕಂಡುಬರುವುದಿಲ್ಲ.

ಆ. ಪ್ರಶ್ನೆ ಉದ್ಭವಿಸುವುದಿಲ್ಲ.

ಇ. ಪ್ರಶ್ನೆ ಉದ್ಭವಿಸುವುದಿಲ್ಲ.

ಈ. ಪ್ರಶ್ನೆ ಉದ್ಭವಿಸುವುದಿಲ್ಲ.

ಕೋಟಗಲ್ ಶೆಟ್ಟಿಹಳ್ಳಿ ಮುಖ್ಯ ರಸ್ತೆಯ ಡಾಂಬರೀಕರಣ

1468(1855) ಶ್ರೀ ಚೌಡರೆಡ್ಡಿ (ಚಿಂತಾಮಣಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಚಿಂತಾಮಣಿ ಕ್ಷೇತ್ರಕ್ಕೆ ಸೇರಿದ ಚಿಂತಾಮಣಿ ಚೇಳೂರು ರಸ್ತೆಯಿಂದ ಚಿಂತಾಮಣಿ ಬಾಗೇಪಲ್ಲಿ ರಸ್ತೆಗೆ ಕೋಟಗಲ್, ಶೆಟ್ಟಿಹಳ್ಳಿ ಮೂಲಕ ಸೇರುವ ಜಿಲ್ಲಾ ಪರಿಷತ್ ರಸ್ತೆಯು ಎಷ್ಟು ಕಿಲೋ ಮೀಟರ್ ದೂರವಿರುತ್ತದೆ;

2. ಸದರಿ ರಸ್ತೆಯು ಹಾಳಾಗಿ ವಾಹನ ಮತ್ತು ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

3. ಹಾಗಿದ್ದರೆ, ಡಾಂಬರೀಕರಣ ಮಾಡಲು ತುರ್ತುಕ್ರಮವನ್ನೇನಾದರೂ ಸರ್ಕಾರವು ತೆಗೆದುಕೊಳ್ಳುವುದೇ;

4. ಎಷ್ಟು ದಿನಗಳೊಳಗಾಗಿ ಡಾಂಬರೀಕರಣ ಮಾಡಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು)

1. 10. ಕಿ.ಮೀ.ಗಳು

2. ಬಂದಿದೆ.

3. ಈ ರಸ್ತೆಯು 10 ಕಿ.ಮೀ. ಉದ್ದದಲ್ಲಿ 3.6 ಕಿ.ಮೀ. ಡಾಂಬರೀಕರಣಗೊಂಡಿದ್ದು ಉಳಿಕೆ 6.40 ಕಿ.ಮೀ. ಉದ್ದ ರಸ್ತೆಯನ್ನು ಡಾಂಬರೀಕರಣಗೊಳಿಸಲು ಸರ್ಕಾರವು ರೂ. 34.00 ಲಕ್ಷಗಳ ಕಾಮಗಾರಿಗೆ ನಬಾರ್ಡ್ ಯೋಜನೆಯಲ್ಲಿ ಈಗಾಗಲೇ ಅನುಮೋದನೆ ನೀಡಿ ಈ ಕಾಮಗಾರಿಗೆ ಟೆಂಡರನ್ನು ಇತ್ಯರ್ಥ ಮಾಡಲಾಗಿ ಕೆಲಸ ಪ್ರಾರಂಭಿಸಲು ಕಾರ್ಯಾದೇಶ ನೀಡಲಾಗಿದೆ.

4. ಮೂರು ತಿಂಗಳೊಳಗಾಗಿ ಡಾಂಬರೀಕರಣ ಮಾಡಲಾಗುವುದು.